CW : 1

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1577/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಆದಂ ಸಾಹೇಬ್ |
| ತಂದೆಯ ಹೆಸರು | : | ಖಾಸಿಂ ಸಾಹೇಬ್ |
| ಪ್ರಾಯ | : | 61 ವರ್ಷ |
| ಉದ್ಯೋಗ | | ಚಾಲಕ |
| ವಾಸಸ್ಥಳ | : | ಕಾವು ಗ್ರಾಮ |

ದಿನಾಂಕ:**17.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ಮೃತ ಇಬ್ರಾಹಿಂ ನನ್ನ ತಮ್ಮ. ದಿ.5-4-25 ರಂದು ನಾನು ನನ್ನ ಕೆಲಸದ ಮೇರೆಗೆ ಪುತ್ತೂರಿಗೆ ಬಂದಿದ್ದಾಗ ಚಾಸಾ2 ರವರು ಫೋನ್ ಮಾಡಿ ಮದ್ಲ ಎನ್ನುವ ಸ್ಥಳದಲ್ಲಿ ನನ್ನ ತಮ್ಮ ಸ್ಕೂಟಿ ತಾಗಿ ಬಿದ್ದಿದ್ದರು ಎಂದು ತಿಳಿಸಿದ್ದು ನಾನು ಸ್ಥಳಕ್ಕೆ ಬಸ್ಸಿನಲ್ಲಿ ಹೋಗಿ ನೋಡಿದಾಗ ಸ್ಥಳಕ್ಕೆ ಬಂದಿದ್ದ ನನ್ನ ಮಗ ಚಾಸಾ-4 ಸ್ಥಳದಿಂದ ನನ್ನ ತಮ್ಮನನ್ನು ಆ್ಯಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದನು, ನಂತರ ನಾನು ಮಹಾವೀರ ಆಸ್ಪತ್ರೆಗೆ ನನ್ನ ತಮ್ಮನನ್ನು ನೋಡಲು ಹೋದೇನು. ನಾನ ನೋಡಿದಾಗ ನನ್ನ ತಮ್ಮನ ತಲೆಗೆ, ಎದೆಗೆ, ಕುತ್ತಿಗೆಗೆ ಮತ್ತು ಕೈಗಳಿಗೆ ಗಾಯಗಳಾಗಿತ್ತು.

ನನ್ನ ತಮ್ಮ ಇಬ್ರಾಹಿಂ ಕೆಲಸಕ್ಕೆ ಹೋಗಿ ನಡೆದು ಬರುವಾಗ ಆತನಿಗೆ ಸ್ಕೂಟಿ ತಾಗಿ ಅಪಘಾತವಾಗಿದೆ ಎಂದು ಗೊತ್ತಾಯಿತು. ರಾಕೇಶ್ ಎನ್ನುವವರ ಸ್ಕೂಟಿ ತಾಗಿ ಅಪಘಾತವಾಯಿತು ಎಂದು ಗೊತ್ತಾಯಿತು. ಅಪಘಾತ ರಾಕೇಶ್ ಎನ್ನುವವರ ತಪ್ಪಿನಿಂದ ಆಗಿದೆ ಎಂದು ಗೊತ್ತಾಯಿತು. ನಂತರ ನಾನು ಮರುದಿನ ಪೋ. ಠಾಣೆಗೆ ಹೋಗಿ ಅಪಘಾತ ಸಂಬಂಧಿತವಾಗಿ ದೂರು ಕೊಟ್ಟಿದ್ದೇನೆ.

ಸಾಕ್ಷಿಯು ದೂರನ್ನು ಹಾಗೂ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ.1 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1ಎ ಎಂದು ಗುರುತಿಸಲಾಯಿತು.

ದಿ.7-4-25 ರಂದು ಅಪಘಾತ ನಡೆದ ಸ್ಥಳಕ್ಕೆ ಪೊಲೀಸರು ಬಂದಿದ್ದು ನಾನು ಅಪಘಾತ ಸ್ಥಳವನ್ನು ತೋರಿಸಿದ್ದೇನೆ. ಸಾಕ್ಷಿಯು ಸ್ಥಳ ಮಹಜರು ಹಾಗೂ ಸ್ಥಳದ ಕರಡು ನಕಾಶೆಯನ್ನು ಹಾಗೂ ಅವುಗಳಲ್ಲಿನ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಸಹಿಗಳನ್ನು

2ಎ ಹಾಗೂ 3ಎ ಎಂದು ಗುರುತಿಸಲಾಯಿತು. ನಂತರ ಪೋ ಠಾಣೆಗೆ ಬಂದಿದ್ದು ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿಯು ಸೊತ್ತು ಸ್ವಾದೀನತಾ ಮಹಜರು ಹಾಗು ಅದರಲ್ಲಿನ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು 4ಎ ಎಂದು ಗುರುತಿಸಲಾಯಿತು. ಪೋ ಠಾಣೆಯಲ್ಲಿ ಪೊಲೀಸರು ಸ್ಕೂಟಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ನನ್ನ ತಮ್ಮ ಇಬ್ರಾಹಿಂನನ್ನು ಮಹಾವೀರ ಆಸ್ಪತ್ರೆಯಿಂದ ಪುತ್ತೂರಿನ ಸರ್ಕಾರೀ ಆಸ್ಪತ್ರೆಗೆ ಶಿಫ್ಟ್ ಮಾಡಿದ್ದಾರೆ. ಅವರ ಕುತ್ತಿಗೆ ಭಾಗಕ್ಕೆ ತೀವ್ರತರವಾದ ಗಾಯವಾಗಿತ್ತು, ಅಲ್ಲಿ ವೈದ್ಯರು 2 ದಿನ ಚಿಕಿತ್ಸೆ ಕೊಟ್ಟು ನಂತರ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿದರು. ಅಲ್ಲಿನ ವೈದ್ಯರು ಪರೀಕ್ಷಿಸಿ ನನ್ನ ತಮ್ಮ ಉಳಿಯುವುದಿಲ್ಲ ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದು ನಾವು ವಾಪಸ್ಸು ಮನೆಗೆ ನನ್ನ ತಮ್ಮನನ್ನು ಕರೆದುಕೊಂಡು ಬಂದಿದ್ದು ಆತ 2 ದಿನ ಕಳೆದ ನಂತರ ಅಪಘಾತವಾದ 10 ದಿನಗಳ ನಂತರ ಮೃತನಾಗಿರುತ್ತಾನೆ. ನನ್ನ ತಮ್ಮ ಮೃತನಾದ ಬಗ್ಗೆ ಪೋಲೀಸರಿಗೆ ಮಾಹಿತಿ ಕೊಟ್ಟಿದ್ದೇನೆ.

ಅಪಘಾತ ಸಂಬಂಧಿತವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಯಾರ ತಪ್ಪಿನಿಂದ ನನ್ನ ತಮ್ಮ ಮೃತಪಡಲು ಕಾರಣ ಎಂದು ನನಗೆ ಗೊತ್ತಿಲ್ಲ. ಸ್ಕೂಟಿಯ ಫೊಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಕೆಎ-21-ಇ-2600 ನೊಂದಣಿ ಸಂ ಯ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯು 4 ಭಾವಚಿತ್ರಗಳನ್ನು ನೋಡಿ ಅದರಲ್ಲಿ ತಾನು ಇರುವುದನ್ನು ಗುರುತಿಸಿದ್ದು ಅದನ್ನು ಒಟ್ಟಾರೆಯಾಗಿ ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ಭಾವಚಿತ್ರಗಳನ್ನು ಅಪಘಾತ ಆದ ಸ್ಥಳದಲ್ಲಿ ತೆಗೆಯಲಾಗಿದೆ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಅಪಘಾತದ ಬಗ್ಗೆ ನನಗೆ ಯಾವುದೆ ಮಾಹಿತಿಯಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೋದಾಗ ಅಲ್ಲಿ ಯಾರೂ ಇರಲಿಲ್ಲ. ಅಪಘಾತ ನಿಖರವಾಗಿ ಯಾವ ಸ್ಥಳದಲ್ಲಿ ಆಯಿತು ಎಂದು ನನಗೆ ಹೇಳಲಾಗುವುದಿಲ್ಲ. ನಿಪಿ-6 ರಲ್ಲಿ ನನ್ನ ಫೊಟೋವನ್ನು ತೆಗೆದದ್ದು ಹೊರತುಪಡಿಸಿ ಮಿಕ್ಕ ಬರವಣಿಗೆಯನ್ನೆಲ್ಲಾ ಪೋ ಠಾಣೆಯಲ್ಲಿ ಮಾಡಲಾಗಿದೆ. ನಾನು ಸಹಿ ಮಾಡಿದ ನಿಪಿ-1 ರಿಂದ 4 ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ನಾನು ಲಿಖಿತವಾಗಿ ದೂರು ಬರೆದುಕೊಟ್ಟಿಲ್ಲ. ನಾನು ಬರೆದ ದೂರಿಗೆ ಸಹಿ ಮಾತ್ರ ಮಾಡಿದ್ದೇನೆ. ದೂರಿನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ರಾಕೇಶ ಎನ್ನುವ ವ್ಯಕ್ತಿಯ ಬಗ್ಗೆ ಪೊಲೀಸರು ತಿಳಿಸಿದ್ದಾರೆ. ನಿಪಿ-5

ರಲ್ಲಿ ಕಾಣಿಸಿರುವ ವಾಹನದ ಮೇಲೆ ಅಪಘಾತ ಆಗಿದೆ ಎನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿಯಿಲ್ಲ. ನಿಪಿ-5 ರಲ್ಲಿ ಕಾಣುವ ವಾಹನವನ್ನು ಪೊಲೀಸರು ತೋರಿಸಿರುವ ಕಾರಣ ನಾನು ಗುರುತಿಸಿದ್ದೇನೆ ಎಂದರೆ ಸರಿ. ಪೋ ಠಾಣೆಯಲ್ಲಿ ನಾನು ಬರೆದ ದಾಖಲೆಗೆ ಸಹಿ ಮಾಡಿದ್ದು ಬಿಟ್ಟರೆ ನನ್ನ ಸಮಕ್ಷಮ ಯಾವುದೇ ಸೊತ್ತು ಸ್ವಾದೀನತೆ ಆಗಿಲ್ಲ.

ಅಪಘಾತ ಸ್ಥಳದಲ್ಲಿ ಅಪಘಾತ ಸಂಬಂಧಿತ ಯಾವುದೇ ಕುರುಹುಗಳು ಇರಲಿಲ್ಲ ಎಂದರೆ ಸಾಕ್ಷಿಯು ರಕ್ತ ಚೆಲ್ಲಿತ್ತು ಎಂದು ನುಡಿಯುತ್ತಾರೆ. ರಕ್ತ ಚೆಲ್ಲಿತ್ತು ಎನ್ನುವ ಸಂಬಂಧಿತವಾಗಿ ಯಾವುದೇ ಮಹಜರು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ಬಿದ್ದಿದ್ದ ಎನ್ನುವ ಸ್ಥಳ ರಸ್ತೆ ಕಾಮಗಾರಿ ನಡೆಯುತ್ತಿದ್ದ ಜಾಗ ಎಂದರೆ ಸರಿ. ನಿಪಿ-1 ರಲ್ಲಿ ಕಾಣಿಸಿರುವಂತೆ ಯಾವುದೇ ತಕ್ಷೀರು ನಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ದಾಖಲೆಗಳಿಗೆಲ್ಲಾ ನಾನು ಸಹಿ ಮಾಡಿದ್ದೇನೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 1**

PW : 1